ಮುಲ್ಕಿಯಲ್ಲೊಂದು ನ್ಯಾಯಾಲಯ

೧೨೨೬. ಶ್ರೀ ಕೆ. ಸೋಮಪ್ಪ ಸುವರ್ಣ, (ಮೂಡಬಿದಿರೆ).—ಮಾನ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಮುಲ್ಕಿಯಲ್ಲಿ ಬ್ರಿಟಿಷರ ಕಾಲದಲ್ಲಿ ನ್ಯಾಯಾಲಯವಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇಲ್ಲಿಯ ಜನರು ಈಗ ನ್ಯಾಯಾಲಯಕ್ಕಾಗಿ ೫೦ ಕಿ. ಮೀ. ದೂರದ ಕಾರ್ಕಳಕ್ಕೆ ಹೋಗಿ ಬೇಕಾದುದರಿಂದ ಜನರಿಗೆ ಬಹಳ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಕಾರ್ಕಳ ನ್ಯಾಯಾಲಯದಲ್ಲಿ ಕೇಸುಗಳ ಸಂಖ್ಯೆ ಜಾಸ್ತಿಯಾಗಿದ್ದು ಜನರಿಗೆ ಬಹಳ ತೊಂದರೆಯಾಗಿರುವುದು ನಿಜವೇ ?

ಈ) ಮುಲ್ಕಿಯಲ್ಲಿ ನ್ಯಾಯಾಲಯವು ತೆರೆಯುವಂತೆ ಜನರು ಮನವಿಯನ್ನು ಹಲವಾರು ವರ್ಷಗಳಿಂದ ಒಪ್ಪಿಸಿರುವುದರಿಂದ ಅಲ್ಲಿ ನ್ಯಾಯಾಲಯ ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಯೋಜನಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು)

ಅ) ಮಾಹಿತಿಯು ಲಭ್ಯವಿಲ್ಲ.

ಆ) ಮುಲ್ಕಿಯು ಕಾರ್ಕಳ ನ್ಯಾಯಾಲಯದ ವ್ಯಾಪ್ತಿಯಲ್ಲಿದೆ. ಆದ್ದರಿಂದ, ಸಾರ್ವಜನಿಕರು ಅಲ್ಲಿಗೆ ಹೋಗಬೇಕಾಗಿದೆ.

ಇ) ಕಾರ್ಕಳ ನ್ಯಾಯಾಲಯದಲ್ಲಿ ಇತ್ಯರ್ಥವಾಗದ ಪ್ರಕರಣಗಳ ಸಂಖ್ಯೆ ಜಾಸ್ತಿ ಇದೆ.

ಈ) ಉಚ್ಚ ನ್ಯಾಯಾಲಯವು ಸದ್ಯದಲ್ಲಿ ಮುಲ್ಕಿಯಲ್ಲಿ ಮುನ್ಸಿಫ್ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಸ್ಥಾಪನೆ ಸಮರ್ಥನೀಯವಲ್ಲವೆಂದು ಭಾವಿಸಿರುತ್ತದೆ.

ಬಂಗಾರಪೇಟೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಸ್ಥಾಪನೆ.

೧೪೩೨. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಂಗಾರಪೇಟೆಯಲ್ಲಿ ಕೆ. ಎಸ್.ಆರ್.ಟಿಸಿ ಬಸ್ ನಿಲ್ದಾಣವನ್ನು ಸ್ಥಾಪಿಸಲಾಗಿದೆಯೇ;

ಆ) ಇಲ್ಲದಿದ್ದಲ್ಲಿ ಬಂಗಾರಪೇಟೆ ತಾಲ್ಲೂಕು ಕೇಂದ್ರವಾಗಿರುವುದರಿಂದ ಅಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣವನ್ನು ಸ್ಥಾಪಿಸಲಾಗುವುದೇ ಹಾಗಿದ್ದಲ್ಲಿ ಯಾವಾಗ;

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು)

ಅ) ಇಲ್ಲ.

ಆ) ಹೌದು ಸೂಕ್ತ ನಿವೇಶನವನ್ನು ಸ್ವಾಧೀನಕ್ಕೆ ಪಡೆದುಕೊಂಡಾಗ.

ಇ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಬಾಬುಗಳಿಗೆ ಹಣವನ್ನು ಮಾರ್ಚ್ ತಿಂಗಳಿನಲ್ಲಿಯೇ ಖರ್ಚು ಮಾಡುತ್ತಿರುವ ಬಗ್ಗೆ

೧೪೬೯. ಶ್ರೀ ಪಿ. ಜಿ. ಆರ್. ಸಿಂಧ್ಯ, (ಕನಕಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ —

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಬಾಬುಗಳಲ್ಲಿ ಖರ್ಚು ಮಾಡುತ್ತಿರುವ ಹಣವನ್ನು ಮಾರ್ಚ್ ತಿಂಗಳಿನಲ್ಲಿಯೇ ಖರ್ಚು ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಇದನ್ನು ಸರಿಪಡಿಸಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ, (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ವಿವಿಧ ಬಾಬುಗಳ ಎಲ್ಲಾ ಖರ್ಚುಗಳನ್ನು ಮಾರ್ಚಿ ತಿಂಗಳಲ್ಲಿ ಮಾಡುತ್ತಿಲ್ಲ. ಹಣ ಭರವಸೆ ಪತ್ರಗಳು ಬಿಡುಗಡೆಯಾದ ತಿಂಗಳುಗಳಲ್ಲಿ ಮಾತ್ರವೇ ಖರ್ಚು ಮಾಡಲಾಗುತ್ತಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಸಿರು ಕಾರ್ಡು ಕೊಡದೇ ಇರುವವರ ಸಂಖ್ಯೆ

೧೫೬೬ ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಹಸಿರು ಕಾರ್ಡುಗಳಿವೆ ? ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಎಷ್ಟು ಕಾರ್ಡು ಕೊಟ್ಟಿರುತ್ತೀರಿ ?

ಆ) ಈಗ ಕೊಡದೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಹಸಿರು ಕಾರ್ಡುಗಳನ್ನು ಕೊಡುವುದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಅಜೀಜ್ ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಒಟ್ಟು	೧,೬೮,೯೭೮
ಪರಿಶಿಷ್ಟ ಜಾತಿ	೪೮,೬೯೫
ಪರಿಶಿಷ್ಟ ಪಂಗಡ	೨೬,೫೦೧

ಆ) ಕಾರ್ಡುಗಳ ವಿತರಣೆಯು ಸತತವಾದ ಕಾರ್ಯವಾಗಿದ್ದು, ಅದು ಪತ್ತೆ ಹಚ್ಚಿ ರದ್ದು ಪಡಿಸಲಾದ ಜೋಟಾ ಹಸಿರು ಕಾರ್ಡುಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ.

ಚಿತ್ರದುರ್ಗ ಜಿಲ್ಲೆಯ ಗಂಗಾಕಲ್ಯಾಣ ಯೋಜನೆ

೧೫೬೬ ಶ್ರೀ ಎನ್. ಜಿ. ನಾಯ್ಕ (ಮೊಳಕಾಲ್ಮೂರು). —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಗಂಗಾ ಕಲ್ಯಾಣ ಯೋಜನೆಯ ರೂಪ ರೇಷೆಗಳೇನು,

ಆ) ಈ ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆ ಅದರಲ್ಲೂ ಮುಖ್ಯವಾಗಿ ಮೊಳಕಾಲ್ಮೂರು ಕ್ಷೇತ್ರದಲ್ಲಿ ಎಷ್ಟು ಜನರಿಗೆ ಅನುಕೂಲ ಕಲ್ಪಿಸಲಾಗಿದೆ.

ಇ) ಈ ಅನುಕೂಲ ಕಲ್ಪಿಸಿದರ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಗಂಗಾ ಕಲ್ಯಾಣ ಯೋಜನೆಯಿಂದ ತೆರೆದ ಬಾವಿ, ಕೊಳವೆ ಬಾವಿ ಹಾಗೂ ಹಳ್ಳಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಪ್ರತಿಯೊಂದು ಯೋಜನೆಯಿಂದ ಉಪಯೋಗ ಪಡೆಯುವ ಕನಿಷ್ಟ ಅಚ್ಚುಕಟ್ಟು ೧೫ ಎಕರೆಗಳಾಗಿರುತ್ತದೆ ಮತ್ತು ತಗಲುವ ವೆಚ್ಚವು ಎಕರೆಗೆ ರೂ. ೭೦೦೦ಗಳನ್ನು ವಿಾರಬಾರದು. ಈ ಯೋಜನೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಇತರ ಕೋಮಿನವರಿಗೆ ಪ್ರಯೋಜನವಾಗುವುದು. ಸದರಿ ಯೋಜನೆಯಲ್ಲಿ ಎರಡು ವರ್ಗಗಳಿವೆ. ಮೊದಲನೆಯ ವರ್ಗದಲ್ಲಿ ಒಟ್ಟು ಪ್ರಯೋಜನ ಪಡೆಯುವ ಜಮೀನಿನಲ್ಲಿ ಶೇಕಡ ೭೫ ಭಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು ಮತ್ತು ಎರಡನೆಯ ವರ್ಗದಲ್ಲಿ ಹಿಂದುಳಿದ ವರ್ಗ ಹಾಗೂ ಇತರೆ ಅಲ್ಪಸಂಖ್ಯಾತ ಕೋಮುಗಳಿಗೆ ಸೇರಿದ ಶೇಕಡ ೭೫ ಭಾಗದವರಿಗೆ ಪ್ರಯೋಜನ ಕಲ್ಪಿಸಲಾಗುವುದು.